## ಯೂಟ್ಯೂಬ್ ಮಮ್ಮಿ

ಗೆಳತಿ ವೀಣಾ ಒಮ್ಮೆ ಎಲ್ಲ ಗೆಳತಿಯರಿಗೂ ಊಟಕ್ಕೆ ಕರೆದಿದ್ದಳು. ಊಟ ಬಡಿಸುವುದಕ್ಕೆ ಆಕೆಯ ಇಬ್ಬರು ಮಕ್ಕಳೂ ಸಹಾಯ ಮಾಡುತ್ತಿದ್ದರು. ಅವಳ ಮಗಳೂ ಸಹ ಒಂದು ಹೊಸರುಚಿ ಮಾಡಿದ್ದಳು. ನಿಜವಾಗಿಯೂ ತುಂಬಾ ಚೆನ್ನಾಗಿತ್ತು. ನಾವೆಲ್ಲಾ, 'ಮಗಳಿಗೆ ಎಷ್ಟು ಚೆನ್ನಾಗಿ ಅಡುಗೆ ಕಲಿಸಿದ್ದೀಯಾ...' ಎಂದು ಹೊಗಳಿಯೇ ಹೊಗಳಿದ್ದು. ಅಷ್ಟರಲ್ಲಿ ಅಡುಗೆ ಮನೆಯಿಂದ ಬಂದ ಆಕೆಯ ಮಗಳು, 'ಇದು ಈ ಮಮ್ಮಿ ಕಲಿಸಿದ್ದಲ್ಲ ಆಂಟೀ, ಯೂಟ್ಯೂಬ್ ಮಮ್ಮಿ ಕಲಿಸಿದ್ದು' ಎನ್ನಬೇಕೆ!

**ನಳಿನಿ ಟಿ. ಭೀಮಪ್ಪ**





ಕಲೆ: ಗಣೇಶ್ ಆಚಾರ್ಯ

## ಅಂಕಲ್ ಮಂಗ

ಆಗ ತಾನೇ ಆಫೀಸ್‌ನಿಂದ ಮನೆಗೆ ಬಂದಿದ್ದೆ. ನಮ್ಮ ಮನೆ ಪಕ್ಕದ ಕುಸುಮ, 'ಅಂಕಲ್ ಮಂಗ... ಅಂಕಲ್ ಮಂಗ...' ಎಂದು ಏಕಾಏಕಿ ಕಿರುಚಾಡತೊಡಗಿದಳು. ಅಲ್ಲೇ ಆಟವಾಡುತ್ತಿದ್ದ ಇನ್ನುಳಿದ ಮಕ್ಕಳು, 'ಅಂಕಲ್, ಕುಸುಮ ನಿಮ್ಮನ್ನ ಮಂಗ... ಮಂಗ... ಅಂತಿದ್ದಾಳೆ...' ಎಂದು ದೂರು ಹೇಳಿದರು. ನಾನು ಹೊರಗೆ ಬಂದು ನೋಡಿದೆ. ನಿಜಕ್ಕೂ ನಡೆದ ಘಟನೆ ಬೇರೆಯೇ ಇತ್ತು. ತೆಂಗಿನ ಮರಗಳಿದ್ದ ನಮ್ಮ ಅಂಗಳಕ್ಕೆ ಆಗಾಗ ಎಳನೀರು ಕೀಳಲು ಮಂಗಗಳು ಬರುತ್ತಿರುತ್ತವೆ. ಆ ದಿನ ಮಂಗಗಳು ಬಂದಾಗ ಅದನ್ನು ನನಗೆ ತಿಳಿಸಲು ಆಕೆ ಕೂಗಿದ್ದಾಳೆ. ಅದು 'ಅಂಕಲ್ ಮಂಗ' ಆಗಿದೆ!

**ಟಿ. ಕೃಷ್ಣಮೂರ್ತಿ**